ಯಶೋದಾ ಶಿವಣ್ಣ ಶೆಟ್ಟಿ, ಅಜೆಕಾರು

*ಮಂತ್ರಿಗಳು ಸತ್ತರೆ ಶೋಕಾಚರಣೆ; ಆದರೆ ದೇಶಕ್ಕಾಗಿ ಮಡಿದ ಯೋಧ ಸತ್ತರೆ ಶೋಕಾಚರಣೆ ಇಲ್ಲ. ಏಕೆ?*



ಮಂತ್ರಿ ಮಾಡಿರುವುದು ತುಂಬಲಾರದ ನಷ್ಟವಾದ್ದರಿಂದ ಶೋಕ; ಯೋಧನ ಅರ್ಪಣೆ ಸ್ತುತ್ಯವಾದ್ದರಿಂದ ಹೆಮ್ಮೆ.

ಕೊಕ್ಕಡ ವೆಂಕಟ್ರಮಣ ಭಟ್, ಮಂಡ್ಯ

*ಶಿವನು ಕಾಮನನ್ನು ಸುಟ್ಟನೆಂದು ಕತೆ ಕೇಳಿದೆ. ನಿಜವೇ ಅಣ್ಣಾ?*

ನಿಜ. ಸುಡುವುದಕ್ಕೆ ಮುಂಚೆ ತಣ್ಣಗಿದ್ದ ಕಾಮ ಈಗ ಕಾವು ಏರಿ ಕಾಲುಸುಟ್ಟ ಬೆಕ್ಕಿನಂತೆ ಎಲ್ಲೆಡೆ ಹಾರಾಡುತ್ತಿದ್ದಾನೆ.

ಹೆಚ್.ವಿ. ಶ್ರೀಧರ್, ಬೆಂಗಳೂರು

*ಚಲನಚಿತ್ರಗಳ ವಿಮರ್ಶೆ ಇರುವಂತೆ ಧಾರಾವಾಹಿಗಳ ವಿಮರ್ಶೆಯೂ ಇರುವಂತಿದ್ದರೆ....?*

ಆಗದು. ವಿಮರ್ಶಿಸುವುದಕ್ಕೆ ಕೊಂಚವಾದರೂ ಕಥೆ ಇರಬೇಕಾಗುತ್ತದೆ.

ಸೀಮಂತಿನಿ ದೇಸಾಯಿ, ಬೆಂಗಳೂರು

*ಬೆಂಗಳೂರಿನ ಟ್ರಾಫಿಕ್ ಜಾಮ್ ಯಾವ ಫ್ಲೇವರ್ ರಾಮ್?*




ವಾಹನದ ಇಂಧನಗಳ ಜನನಿ ಕಚ್ಚಾತೈಲಮ್ಮನ ತವರಿನದು ಅರೇಬಿಯನ್ ಫ್ಲೇವರ್.

ಹರಿತಸ, ಬೆಂಗಳೂರು

*ಪುರಾಣಗಳಲ್ಲಿ ರಾಕ್ಷಸರಿದ್ದರು. ಈಗ?*

ಅವರ ಸಂತತಿ ಇದೆ. ಈಗಿನವರಿಗೆ ಹೋಲಿಸಿದರೆ ಅವರು ಪ್ರಿ ನರ್ಸರಿ.

ವಿ. ಹೇಮಂತಕುಮಾರ, ಬೆಂಗಳೂರು

*ಅಲುಗಾಡುತ್ತಿರುವ ಹಲ್ಲನ್ನು ನಾಲಿಗೆ ಸವರುತ್ತಲೇ ಇರುತ್ತದೆ. ಏಕೆ?*

ಅಂತ್ಯ ಸಂಸ್ಕಾರಕ್ಕೆ ಮುನ್ನ ಸ್ನಾನ ಮಾಡಿಸುತ್ತೇವಲ್ಲ! ಹಲ್ಲಿಗೆ ಎಂಜಲಿನದೇ ಸ್ನಾನ.

ಹಾಡ್ಯ ಬ. ಜಯಾನಂದ, ಮೈಸೂರು

*ಹೆಬ್ಬೆಟ್ ರಾಮಕ್ಕ ಒಂದು ಕಡೆ, ಟ್ವೀಟ್ ರಮ್ಯಕ್ಕ ಇನ್ನೊಂದು ಕಡೆ. ನೀವು ಯಾರ ಕಡೆ?*

ಹೆಬ್ಬೆಟ್ ರಾಮಕ್ಕ, ಟ್ವೀಟ್ ರಾಮಕ್ಕ ಆಗಲು ಬೆಂಬಲಿಸುವ ವಿದ್ಯಾವರ್ಧಕ ಪಡೆಯ ಕಡೆ.

ಎಂ.ಎ. ಕುಮಾರ್, ಬೆಂಗಳೂರು

*ಕನಸಿನಲ್ಲಿಯೂ ಮಡದಿಯ ಹೆಸರನ್ನು ಕನವರಿಸುವವರು ಇದ್ದಾರಾ ರಾಮ್?*

ಇದ್ದಾರೆ. ಕನವರಿಸುವುದಷ್ಟೇ ಅಲ್ಲ, ಆಗಾಗ್ಗೆ ಬೆಚ್ಚಿಬೀಳುತ್ತಲೂ ಇರುತ್ತಾರೆ.

ಸವಿತಾ ರವಿ ಸುಟ್ಟಟ್ಟಿ, ಬನಹಟ್ಟಿ

*ಇಲ್ಲೊಬ್ಬ ಹುಡುಗ ಹುಡುಗಿಯರನ್ನು ಸೈಕಲ್ ಎಂದು ಕರೆಯುತ್ತಾನೆ. ಹುಡುಗಿಯರಿಗೂ, ಸೈಕಲ್‌ಗೂ ಏನು ಸಂಬಂಧ?*

ಸ್ತ್ರೀಕುಲಕ್ಕೇ ಸಂಬಂಧವಿದೆ ತುಳಿದಷ್ಟೂ ಮುಂದಕ್ಕೆ ಸಾಗುವುದು ಸೈಕಲ್ ಮತ್ತು ಸ್ತ್ರೀಯರ ಗುಣ.

ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ

*ಗಂಡಾಂತರ ಎನ್ನುವುದಕ್ಕೆ ಕರಾರುವಾಕ್ಕಾದ ಉತ್ತರ ತಿಳಿಸುವಿರಾ ರಾಮ್?*

ಒಬ್ಬ ಪತಿಯನ್ನು ಬಿಟ್ಟು, ಇನ್ನೊಬ್ಬನನ್ನು ಕಟ್ಟಿಕೊಳ್ಳುವುದಕ್ಕೆ ನಡುವಿನ ಅಂತರ.

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ

*ಹಳೆಯ ಹಣೆಬರಹ ಎಡಿಟ್ ಮಾಡಿ ಹೊಸ ಹಣೆಬರಹ ಬರೆದರೆ?*

ಕ್ಷಮಿಸಿ. ಅದು ರೀಡ್ ಓನ್ಲಿ ಫೈಲ್. ಎಡಿಟ್ ಆದರೂ ಸೇವ್ ಆಗುವುದಿಲ್ಲ.

ಎನ್.ಆರ್. ತಮ್ಮಯ್ಯಶೆಟ್ಟಿ, ಅರಸೀಕೆರೆ

*ನೀವು ಉತ್ತರಿಸಲಾಗದ ಪ್ರಶ್ನೆ ಯಾವುದು ಸರ್?*

ನೀವು ಯಾವುದನ್ನು ಕೇಳಲಾಗದೋ ಅದೇ.

ಆರ್. ಮಧುಸೂದನ್, ಹಾಸನ

*ಮನುಷ್ಯನ ರಕ್ತಕ್ಕೆ ಪ್ರಾಣಿಗಳ ರಕ್ತ ಏಕೆ ಹೊಂದಾಣಿಕೆ ಆಗುವುದಿಲ್ಲ?*

ಪ್ರಾಣಿಗಳ ರಕ್ತದಲ್ಲಿ ಸ್ವಾರ್ಥರಕ್ತಕಣಗಳು ಇರುವುದಿಲ್ಲವಲ್ಲ.

## ಬಹುಮಾನಿತ ಪ್ರಶ್ನೆ

ಅಮರಯ್ಯ ಪತ್ರಿಮಠ, ಸುರಪುರ

*ದರ್ಜಿಗಳು ಅಳತೆಪಟ್ಟಿಯನ್ನು ಯಾವಾಗಲೂ ಕೊರಳಲ್ಲಿ ಹಾಕಿಕೊಂಡಿರುತ್ತಾರಲ್ಲ, ಯಾಕೆ?*

ಅಳತೆ ತೆಗೆದುಕೊಳ್ಳುವಲ್ಲಿ ಹೆಚ್ಚುಕಡಿಮೆ ಆದರೆ ತಮ್ಮ ಕುತ್ತಿಗೆಗೇ ಬರುತ್ತದೆ ಎಂಬುದನ್ನು ಸೂಚಿಸಲು.

ದೀಪಾ ವಿ. ಮಹಾಲೆ, ಸಾಂಬ್ರಾಣಿ

*ಕಲೆಗೆ ಬೆಲೆ ಕಟ್ಟಲಾಗದು. ಏಕೆ?*

ಒಬ್ಬೊಬ್ಬ ಡ್ರೈ ಕ್ಲೀನರ್ ಒಂದೊಂದು ಬೆಲೆ ಹೇಳುವುದರಿಂದ.

ಸುಮಾ ರಮೇಶ್, ಹಾಸನ

*ಹತ್ತಾರು ಜನರ ಬೆವರು, ಕೊಳೆಗಳಿಂದ ಕೂಡಿದ ನೋಟನ್ನು ಪಡೆಯುವಾಗ ಮಾತ್ರ ಯಾರೂ ಅಸಹ್ಯಪಡರು ಏಕೆ?*

ಟೀಯಲ್ಲಿ ನೊಣವಿದ್ದರೆ ಟೀ ಚೆಲ್ಲುತ್ತೇವೆ, ತುಪ್ಪದಲ್ಲಿ ನೊಣ ಬಿದ್ದರೆ ನೊಣ ಹೊರಕ್ಕೆ. ಅಮೂಲ್ಯಕ್ಕೆ ಅಸಹ್ಯವಿಲ್ಲ.

ಟಿ.ಎಂ. ಮಾನಪ್ಪ, ಶಿವಮೊಗ್ಗ

*ಕತ್ತರಿಗೂ, ಸೂಜಿಗೂ ಏನು ವ್ಯತ್ಯಾಸ?*



ಕತ್ತರಿ ಅತಿ ಸರ್ವತ್ರ ವರ್ಜಯೇತ್ ಎನ್ನುತ್ತದೆ; ಸೂಜಿ ಯೂನಿಟಿ ಇನ್ ಡೈವರ್ಸಿಟಿ ಎನ್ನುತ್ತದೆ.

ನರಸಿಂಹ ಪೈ, ಹೊನ್ನಾವರ

*ಗಂಡಸು ಗದ್ಯ, ಹೆಂಗಸು ಪದ್ಯ ಎನ್ನುತ್ತಾರೆ. ಏಕೆ?*

ಪದ್ಯ ಸಣ್ಣಗಿರುತ್ತದೆ; ಲಯ ಇರುತ್ತದೆ; ಅರ್ಥವಾಗುವುದು ಕಷ್ಟ.

ಮಲ್ಲಿಕಾರ್ಜುನ ಹ. ಬಗಲಿ, ಜತ್ತ

*ಈಗಿನ ಕಾಲದಲ್ಲಿ ಕೃಷ್ಣ ಸುಧಾಮರಂತಹ ಗೆಳೆತನ ಯಾರಲ್ಲಿದೆ?*

ಮುಖಂಡ ಮತದಾರರಲ್ಲಿ; ಐದು ವರ್ಷಕ್ಕೊಮ್ಮೆ.

■ ರಾಮ್